697 ಶ್ರೀ ಪಾಟೀಲ್ ಎ.ಬಿ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರಣ್ಯಕೇಶಿ ನದಿಗೆ ಮಹಾರಾಷ್ಟ್ರದ ಚಿತ್ರಿ ನದಿಯಿಂದ ಒಂದು ಟಿ.ಎಂ.ಸಿ ನೀರನ್ನು ಕಾಯಂ ಆಗಿ ಬಿಡುವ ಬಗ್ಗೆ ಮಹಾರಾಷ್ಟ್ರ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದೆಯೇ (ಮಾಹಿತಿಯನ್ನು ನೀಡುವುದು) ;

ಆ) ಬೇಸಿಗೆ ಸಮಯದಲ್ಲಿ ಹಿರಣ್ಯಕೇಶಿಗೆ ಯಾವಾಗ ನೀರು ಬಿಡಲಾಗುವುದು; ಈ ಕೆಲಸವು ಯಾವ ಹಂತದಲ್ಲಿದೆ ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಇಲ್ಲ

ಕರ್ನಾಟಕ ಸರ್ಕಾರದ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಹಾಗೂ ಮಹಾರಾಷ್ಟ್ರ ಸರ್ಕಾರದ ನೀರಾವರಿ, ಅಚ್ಚುಕಟ್ಟು ಅಭಿವದ್ದಿ ಮತ್ತು ಇಂಧನ ಇಲಾಖೆಗಳ ಸಚಿವರು ದಿನಾಂಕ:14/7/1992 ರಂದು ಮುಂಬಯಿಯಲ್ಲಿ ನಡೆಸಿದ ಸಭೆಯಲ್ಲಿ "ಚಿತ್ರಿ" ಅಣೆಕಟ್ಟಿನ ಎತ್ತವನ್ನು ಒಂದು ಮೀ. ಎತ್ತರಿಸಿ ಕರ್ನಾಟಕ ಭಾಗದಲ್ಲಿ ನಿರ್ಮಿಸಿರುವ ಕಾಂಡಾಲ ಮತ್ತು ಗೋಟೂರ್ ವಿಯರ್‌ಗಳಿಗೆ ನೀರು ಸರಬರಾಜು ಮಾಡಲು ಅನುಕೂಲವಾಗುವ ಈ ಪ್ರಸ್ತಾವನೆಯನ್ನು ತಯಾರಿಸಿ ಕರ್ನಾಟಕ ಸರ್ಕಾರದ ಸಹಮತಿಗಾಗಿ ಸಲ್ಲಿಸಬೇಕೆಂದು ಮತ್ತು ಎರಡೂ ರಾಜ್ಯಗಳ ನಡುವೆ ಈ ಪ್ರಸ್ತಾವನೆ ಕುರಿತು ಒಪ್ಪಂದ ಮಾಡಿಕೊಳ್ಳುವಂತೆ ನಿರ್ಧರಿಸಲಾಯಿತು. ಇಲ್ಲಿಯವರೆಗೆ ಕರ್ನಾಟಕದಿಂದ ಸತತವಾಗಿ ಪತ್ರ ವ್ಯವಹಾರ ನಡೆಸಿದ್ದು, ಮಹಾರಾಷ್ಟ್ರದಿಂದ ಯಾವುದೇ ಪ್ರತಿಕ್ರಿಯೆ ಇಲ್ಲದೆ ಕರ್ನಾಟಕದ ಸಚಿವರುಗಳು ಕೂಡ ಖುದ್ದಾಗಿ ಮಹಾರಾಷ್ಟ್ರದ ಸಚಿವರನ್ನು ಭೇಟಿ ಮಾಡಿ ಸಭೆ ನಡೆಸಿರುತ್ತಾರೆ. ಆದರೂ ಇಲ್ಲಿಯವರೆಗೆ ಮಹಾರಾಷ್ಟ್ರದಿಂದ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ಆ) ಬೇಸಿಗೆಯ ತಿಂಗಳುಗಳಲ್ಲಿ ಹಿರಣ್ಯಕೇಶಿ ನದಿಯನ್ನು ಅವಲಂಬಿಸಿರುವ ಕರ್ನಾಟಕ ಭಾಗದ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆಯುಂಟಾದಾಗ ಮಹಾರಾಷ್ಟ್ರದ ಚಿತ್ರಿ ಡ್ಯಾಮ್‌ನಿಂದ ಕರ್ನಾಟಕದ ಹಿರಣ್ಯಕೇಶಿ ನದಿಯಲ್ಲಿ ಕುಡಿಯುವ ನೀರಿಗಾಗಿ ನೀರನ್ನು ಬಿಡುಗಡೆ ಮಾಡಿಸುವಂತೆ ಜಿಲ್ಲಾ ಆಡಳಿತ ಪ್ರಾಧಿಕಾರದಿಂದ ಸರ್ಕಾರಕ್ಕೆ ಕೋರಿಕೆ ಬಂದಲ್ಲಿ ಸರ್ಕಾರದ ಮಟ್ಟದಲ್ಲಿ ಅದನ್ನು ಪರಿಶೀಲಿಸಿ, ಮಹಾರಾಷ್ಟ್ರ ಸರ್ಕಾರವನ್ನು ಚಿತ್ರ ಅಣೆಕಟ್ಟಿನಿಂದ ಹಿರಣ್ಯ ಕೇಶಿ ನದಿಗೆ ನೀರನ್ನು ಬಿಡುವಂತೆ ವಿನಂತಿಸಲಾಗುವುದು ಹಾಗೂ ಒತ್ತಾಯಿಸಲಾಗುವುದು.

ಈ ಹಿಂದೆ 2002ನೇ ಸಾಲಿನ ಬೇಸಿಗೆಯಲ್ಲಿ ಬೆಳಗಾಂ ಜಿಲ್ಲೆಯ ಹಿರಣ್ಯಕೇಶಿ ನದಿಯನ್ನು ಅವಲಂಬಿಸಿರುವ ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದ್ದು.. ಆಗಿನ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಮಹಾರಾಷ್ಟ್ರ ಸರ್ಕಾರವನ್ನು ವಿನಂತಿಸಿ ದಿನಾಂಕ:7–3–2002 ರಿಂದ 26–5–2002 ರ ವರೆಗಿನ ಅವಧಿಯಲ್ಲಿ ಚಿತ್ರಿ ಡ್ಯಾಮ್ ನಿಂದ ಹಿರಣ್ಯಕೇಶಿ ನದಿಯಲ್ಲಿ ಕುಡಿಯುವ ನೀರಿನ ಅಭಾವ ಪರಿಹಾರಕ್ಕಾಗಿ 104 ಎಂ.ಸಿ.ಎಫ್.ಟಿ. ಯಷ್ಟು ನೀರನ್ನು ಪಡೆಯಲಾಗಿದ್ದು, ಈ ನೀರಿನ ಪರಿಮಾಣಕ್ಕೆ ಮಹಾರಾಷ್ಟ್ರ ಸರ್ಕಾರಕ್ಕೆ ಕರಾಕರಣಿಯನ್ನು ಸಹ ಪಾವತಿಸಲಾಗಿರುತ್ತದೆ.

ದಿನಾಂಕ 20 ಫೆಬ್ರವರಿ 2007ರಂದು ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ ಸಚಿವರೇ ಖುದ್ದಾಗಿ ಮುಂಬಯಿಗೆ ಭೇಟಿ ನೀಡಿ ಮಹಾರಾಷ್ಟ್ರದ ನೀರಾವರಿ ಸಚಿವರೊಂದಿಗೆ ಚಿತ್ರಿ ಅಣೆಕಟ್ಟಿನ ಎತ್ತರವನ್ನು ಎತ್ತರಿಸುವ ಪ್ರಸ್ತಾವನೆ ಕುರಿತು ಹಾಗೂ ಬೇಸಿಗೆ ತಿಂಗಳುಗಳಲ್ಲಿ ನೀರನ್ನು ಬಿಡಿಸಿಕೊಳ್ಳುವ ಬಗ್ಗೆ ಕೂಡ ಚರ್ಚಿಸಲು ಉದ್ದೇಶಿಸಲಾಗಿದೆ.

853 ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಾಂಧಿನಗರ ವಿಧಾನಸಭಾ ಕ್ಷೇತ್ರದ ಲಕ್ಷ್ಮಣಪುರಿ ರೈಲ್ವೆ ಜಮೀನಿನಲ್ಲಿ ಇರುವ ಮನೆಗಳ ಸಂಖ್ಯೆ ಎಷ್ಟು;

ಆ) ಈ ಮನೆಗಳನ್ನು ತೆರವುಗೊಳಿಸಲು ರೈಲ್ವೆ ಇಲಾಖೆ ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ನಿವಾಸಿಗಳ ಪುನರ್ವಸತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) 964

ಆ) ಹೌದು

ಈ ಕುಟುಂಬಗಳ ಪೈಕಿ ಬೆಂಗಳೂರು–ಚೆನ್ನೈ ರೈಲ್ವೆ ಹಳಿ ಪಕ್ಕದಲ್ಲಿ ಬರುವ 372 ಕುಟುಂಬಗಳನ್ನು ಗುರುತಿಸಲಾಗಿದ್ದು ಈ ಕುಟುಂಬಗಳನ್ನು ಬೆಂಗಳೂರು ನಗರದ ಆನೇಕಲ್ಲು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕೂಡ್ಲೂ ಗ್ರಾಮ ಸರ್ವೆ ನಂ. 148 ರಲ್ಲಿನ ಮಂಡಳಿ ಜಾಗಕ್ಕೆ ಸ್ಥಳಾಂತರಿಸಲು ಉದ್ದೇಶಿಸಿದೆ.